# ಕುಬೇರರ ಊರಲ್ಲಿ ಹಸಿವಿನಿಂದ ಸಾವು?

ಶಶಿಕಾಂತ ಎಸ್. ಶೆಂಬೆಳ್ಳಿ Updated: 31 ಮಾರ್ಚ್ 2020, 07:31 IST

ಅಕ್ಷರ ಗಾತ್ರ : ಆ | ಆ | ಆ



ಅನ್ನ, ನೀರು ಸಿಗದೆ ಹೊಸಪೇಟೆಯ ರಸ್ತೆಬದಿಯಲ್ಲಿ ಮೃತಪಟ್ಟ ಅಪರಿಚಿತ ವ್ಯಕ್ತಿಯ ಶವವನ್ನು ನಗರಸಭೆಯ ಸಿಬ್ಬಂದಿ ಕಸ ಸಾಗಿಸುವ ವಾಹನದಲ್ಲಿ ಸಾಗಿಸಿದರು

**ಹೊಸಪೇಟೆ:** ಸಕಾಲಕ್ಕೆ ಅನ್ನ, ನೀರು ಸಿಗದೆ ಗಣಿ ನಗರಿಯ ರಸ್ತೆ ಬದಿಯಲ್ಲಿ ವಾರದಲ್ಲಿ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ.

ವಿಚಿತ್ರವೆಂದರೆ ಇಬ್ಬರ ಶವಗಳನ್ನು ನಗರಸಭೆಯ ಕಸ ವಿಲೇವಾರಿ ಮಾಡುವ ವಾಹನದಲ್ಲಿ ಸಾಗಿಸಲಾಗಿದೆ. ಅನ್ನ ಸಿಗದೆ ರಸ್ತೆಬದಿಯಲ್ಲಿ ಶವವಾಗಿ ಬಿದ್ದವರೂ ಯಾರೆಂಬುದೂ ಇದುವರೆಗೆ ಗೊತ್ತಾಗಿಲ್ಲ.

ತಾಲ್ಲೂಕಿನಲ್ಲಿ ಒಂದು ಅಂದಾಜಿನ ಪ್ರಕಾರ, ನಿರ್ಗತಿಕರು, ಭಿಕ್ಷುಕರು, ಅಲೆಮಾರಿಗಳ ಸಂಖ್ಯೆ ಏಳರಿಂದ ಎಂಟು ಸಾವಿರಕ್ಕೂ ಅಧಿಕವಿದೆ. ಕೆಲವರು ರೈಲು ನಿಲ್ದಾಣ, ಬಸ್ ನಿಲ್ದಾಣದಲ್ಲಿ ಭಿಕ್ಷೆ ಬೇಡಿ ಜೀವನ ಸಾಗಿಸುವವರಿದ್ದರೆ, ಕೆಲವರು ದೇವಸ್ಥಾನ, ಮತ್ತೆ ಕೆಲವು ಮಂದಿ ಊರೆಲ್ಲ ಸುತ್ತಾಡಿ ಎಲ್ಲಿ ಕತ್ತಲಾಗುತ್ತದೆಯೋ ಅಲ್ಲಿಯೇ ಉಳಿದು ಬಿಡುತ್ತಾರೆ.

ಆದರೆ, ಎಲ್ಲೆಡೆ ಕೊರೊನಾ ಸೋಂಕು ಹರಡದಂತೆ ತಡೆಯಲು ಲಾಕ್‌ಡೌನ್ ಘೋಷಿಸಿರುವುದರಿಂದ ಬಹುತೇಕರ ಪತ್ತೆ ಇಲ್ಲದಂತಾಗಿದೆ. ಇನ್ನು, ನಗರ ಹೊರವಲಯದ ಜಂಬುನಾಥಹಳ್ಳಿಯಲ್ಲಿ 200ಕ್ಕೂ ಅಧಿಕ ಮಂದಿ ಅಲೆಮಾರಿಗಳಿದ್ದು, ಸಹಾಯಕ್ಕೆ ಅವರು ಅಂಗಲಾಚಿದ್ದಾರೆ.

ನಗರ ಸೇರಿದಂತೆ ತಾಲ್ಲೂಕಿನಲ್ಲಿ ಅನೇಕ ಜನ ಗಣಿ ಉದ್ಯಮಿಗಳಿದ್ದಾರೆ. ಆದರೆ, ಸಂಕಷ್ಟದ ಪರಿಸ್ಥಿತಿಯಲ್ಲಿ ನೆರವಿಗೆ ಬಂದವರೂ ಬೆರಳೆಣಿಕೆಗಿಂತ ಕಡಿಮೆ. ಪತ್ತಿಕೊಂಡ ಕುಟುಂಬದವರು ನಗರದಲ್ಲಿ ಔಷಧ ಸಿಂಪಡಣೆಗೆ ಉಚಿತವಾಗಿ ವಾಹನಗಳನ್ನು ಕೊಟ್ಟಿದ್ದಾರೆ. ಇನ್ನು, ಎಂ.ಜೆ. ನಗರದಲ್ಲಿನ ಉದ್ಯಮಿಗಳು ಸ್ವಂತ ಖರ್ಚಿನಿಂದ ಬಡಾವಣೆಯ ತುಂಬೆಲ್ಲಾ ಔಷಧ ಹೊಡೆಸಿದ್ದಾರೆ. ಇದಿಷ್ಟು ಹೊರತುಪಡಿಸಿದರೆ ಬಹುತೇಕರು ನಮಗೂ ಸಮಾಜಕ್ಕೂ ಸಂಬಂಧವಿಲ್ಲ ಎನ್ನುವಂತೆ ದೂರವೇ ಉಳಿದುಕೊಂಡಿದ್ದಾರೆ ಎನ್ನುವುದು ಸಾರ್ವಜನಿಕರ ಆರೋಪ.

‘ನಗರದಲ್ಲಿ ಕೋಟ್ಯಧಿಪತಿಗಳ ಸಂಖ್ಯೆಯೇನೂ ಕಡಿಮೆಯಿಲ್ಲ. ಗುಡಿ, ಗುಂಡಾರಗಳಿಗೆ ಲಕ್ಷಾಂತರ ರೂಪಾಯಿ ದೇಣಿಗೆ ಕೊಡುತ್ತಾರೆ. ಆದರೆ, ಸಂಕಷ್ಟದ ಪರಿಸ್ಥಿತಿಯಲ್ಲಿ ಯಾರೊಬ್ಬರೂ ಬಡವರ ಸಹಾಯಕ್ಕೆ

ಪ್ರಜಾವಾಣಿ

ಮುಂದೆ ಬರದಿರುವುದು ದುರದೃಷ್ಟಕರ. ಕ್ಷೇತ್ರದಿಂದ ಗೆದ್ದು ಮಂತ್ರಿಯಾಗಿರುವ ಆನಂದ್ ಸಿಂಗ್ ಕೂಡ ಈ ಬಗ್ಗೆ ಚಕಾರ ಎತ್ತುತ್ತಿಲ್ಲ' ಎಂದು ಸಾಮಾಜಿಕ ಕಾರ್ಯಕರ್ತ ಬಸವರಾಜ ಹೇಳಿದರು.

'ಬೇರೆ ಕಡೆಗಳಲ್ಲಿ ಶ್ರೀಮಂತರು ಕೋಟಿ ಕೋಟಿ ದೇಣಿಗೆ ನೀಡುತ್ತಿದ್ದಾರೆ. ನಮ್ಮೂರಿನ ಕುಬೇರರು ಅಷ್ಟು ಕೊಡುವುದು ಬೇಡ. ಎಷ್ಟು ಜನ ಬಡವರು, ಭಿಕ್ಷುಕರಿದ್ದಾರೆ. ಅವರನ್ನು ಗುರುತಿಸಿ, ಕನಿಷ್ಠ ಒಂದು ಹೊತ್ತು ಹೊಟ್ಟೆ ತುಂಬ ಊಟ ಕೊಟ್ಟರೆ ಸಾಕಿತ್ತು. ಆದರೆ, ಈಗ ತಡವಾಗಿದೆ. ಯಾರೊಬ್ಬರೂ ನೆರವಿಗೆ ಮುಂದೆ ಬರದ ಕಾರಣ ಜಿಲ್ಲಾಡಳಿತವೇ ಈಗ ಮುಂದಾಗಿರುವುದು ಉತ್ತಮ ಕೆಲಸ' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

'ಜನ ಮನೆಯೊಳಗೆ ಇರಬೇಕೆಂದು ಸರ್ಕಾರ ಹೇಳುತ್ತದೆ. ಆದರೆ, ಅನೇಕರಿಗೆ ಮನೆಯೇ ಇಲ್ಲ. ಹಲವು ಮಂದಿ ತುಂಗಭದ್ರಾ ಕಾಲುವೆಯ ಪಕ್ಕ ನೆಲೆಸಿದ್ದಾರೆ. ಅವರಿಗೆ ಒಂದು ಹೊತ್ತಿನ ಆಹಾರ ಸಿಗುತ್ತಿಲ್ಲ. ಯಾರೋ ಶ್ರೀಮಂತರಿಗೆ ಕಾಯದೆ ಜಿಲ್ಲಾಡಳಿತವೇ ನೆರವಿಗೆ ಮುಂದೆ ಬರಬೇಕು' ಎಂದು ಸಾಮಾಜಿಕ ಕಾರ್ಯಕರ್ತ ಸೋಮಶೇಖರ್ ಬಣ್ಣದಮನೆ ಆಗ್ರಹಿಸಿದರು.

Hosapete Lockdown Death

ಪ್‌ರಜಾವಾಣಿ **ಫೇಸ್‌ಬುಕ್ ಪುಟವನ್ನು** ಲೈಕ್ ಮಾಡಿ, ಪ್ರಮುಖ ಸುದ್ದಿಗಳ ಅಪ್‌ಡೇಟ್ಸ್ ಪಡೆಯಿರಿ.

ಪ್‌ರಜಾವಾಣಿಯನ್ನು ಟ್ವಿಟರ್‌ನಲ್ಲಿ **ಇಲ್ಲಿ ಫಾಲೋ ಮಾಡಿ**.

ಟೆಲಿಗ್ರಾಂ ಮೂಲಕ ನಮ್ಮ ಸುದ್ದಿಗಳ ಅಪ್‌ಡೇಟ್ಸ್ ಪಡೆಯಲು **ಇಲ್ಲಿ ಕ್ಲಿಕ್ ಮಾಡಿ**.

## ಈ ವಿಭಾಗದಿಂದ ಇನ್ನಷ್ಟು

ಆರೋಗ್ಯ 54 ನಿಮಿಷಗಳ ಹಿಂದೆ
ವರ್ಕ್ ಫ್ರಂ ಹೋಮ್: ಸ್ನಾಯು ಸೆಳೆತಕ್ಕೆ ಪರಿಹಾರವೇನು?

ತುಮಕೂರು 24 ಜುಲೈ, 2020

ಯಾದಗಿರಿ 24 ಜುಲೈ 2020

ಯಾದಗಿರಿ | ಲಾಕ್‌ಡೌನ್ ನಿಯಮ ಉಲ್ಲಂಘನೆ, ₹10 ಲಕ್ಷಕ್ಕೂ ಹೆಚ್ಚು ದಂಡ ಸಂಗ್ರಹ

ದಕ್ಷಿಣ ಕನ್ನಡ 23 ಜುಲೈ 2020

ಮಂಗಳೂರು: ಶೇ 30 ಚಾಲಕರಿಗೂ ಸಿಗದ ಪರಿಹಾರ!

ರಾಜ್ಯ 23 ಜುಲೈ 2020

ಮನೆಮಗಳಾದ ಸ್ಪೇನ್ ಯುವತಿ

ಕೋಲಾರ 24 ಜುಲೈ 2020

ಕೋಲಾರ | ಹಾಲು ಖರೀದಿ ದರ ಕಡಿತ, ಇಂದೇ ಜಾರಿ

ಉತ್ತರ ಕನ್ನಡ 24 ಜುಲೈ 2020

ಶಿರಸಿ | ಹಾನಿ ಬೆಟ್ಟದಷ್ಟು; ಸಿಕ್ಕಿದ್ದು ಬಿಡಿಗಾಸು

ಉಡುಪಿ 23 ಜುಲೈ 2020

ಉಡುಪಿ | ಅಂತರ ಜಿಲ್ಲಾ ಬಸ್ ಸಂಚಾರ ಆರಂಭ, ನೀರಸ ಪ್ರತಿಕ್ರಿಯೆ

ಹಾಸನ 24 ಜುಲೈ 2020

ಆಲೂರು | ಪದವಿ ಪಡೆದರೂ ಚಿಂದಿ ಆಯುವುದೇ ಉದ್ಯೋಗ

ರಾಯಚೂರು 24 ಜುಲೈ 2020

ರಾಯಚೂರು | ಎಪಿಎಂಸಿ; ಕರ ಸಂಗ್ರಹ ಅಲ್ಪ ಇಳಿಕೆ

ಷೇರು ಮಾರುಕಟ್ಟೆ 23 ಜುಲೈ 2020

[illegible]

ಬೆಂಗಳೂರು 23 ಜುಲೈ 2020

ಚಿಕ್ಕಪೇಟೆ: ನಿರ್ಬಂಧ ಮುಂದುವರಿಕೆ

## ವಿಡಿಯೊಗಳು



ಬಳ್ಳಾರಿ | ನೀರು ಮಿಶ್ರಿತ ಪೆಟ್ರೋಲ್ ಮಾರಾಟ!



ವಿಡಿಯೊ ವೈ
ಮಳೆ ವೇಳೆ

ಟಾಪ್ ಟ್ರೆಂಡಿಂಗ್ | ಇತ್ತೀಚಿನ ಸುದ್ದಿ

ವಿದೇಶ 24 ಜುಲೈ 2020

ಭೂಪಟದಲ್ಲಿ ಇಲ್ಲ ಪಿಒಕೆ: ಪಠ್ಯಪುಸ್ತಕ ರದ್ದುಗೊಳಿಸಿದ ಪಾಕಿಸ್ತಾನ

ರಾಷ್ಟ್ರೀಯ 24 ಜುಲೈ 2020

ಚೀನಾದ ಮತ್ತಷ್ಟು ಆ್ಯಪ್‌ಗಳಿಗೆ ನಿಷೇಧದ ಶಿಕ್ಷೆ

ರಾಜ್ಯ 24 ಜುಲೈ 2020

ಸಾರಿಗೆ ಸಿಬ್ಬಂದಿಗೆ ವೇತನ ಬಿಡುಗಡೆ: ಡಿಸಿಎಂ ಸವದಿ

## ಫೋಟೊ ಗ್ಯಾಲರಿ



ಚಿತ್ರಾವಳಿ | ಅಸ್ಸಾಂ ರಾಜ್ಯದಲ್ಲಿ ಪ್ರವಾಹದ ರುದ್ರನರ್ತನ



PHOTOS | ಲಾಕ್‌ಡೌನ್

ತಂತ್ರಜ್ಞಾನ | ಆರೋಗ್ಯ

ರಾಷ್ಟ್ರೀಯ 24 ಜುಲೈ 2020

ಚೀನಾದ ಮತ್ತಷ್ಟು ಆ್ಯಪ್‌ಗಳಿಗೆ ನಿಷೇಧದ ಶಿಕ್ಷೆ

ವಿದೇಶ 22 ಜುಲೈ 2020

ಚೀನಾದ ಹ್ಯಾಕರ್‌ಗಳಿಂದ ಬೌದ್ಧಿಕ ಸೊತ್ತು ಕಳ್ಳತನ: ಅಮೆರಿಕ ಆರೋಪ


ವಾಣಿಜ್ಯ ಸುದ್ದಿ 15 ಜುಲೈ 2020

ರಿಲಯನ್ಸ್ ಜಿಯೊದಿಂದ ದೇಶೀಯ 5ಜಿ ನೆಟ್‌ವರ್ಕ್;

## ಮನರಂಜನೆ




ಮನರಂಜನೆ ಕಾರ್ಯಕ್ರಮಗಳ ಲೈವ್ ನಡೆಸುತ್ತಿದೆ BookMyShow



ಸುಶಾಂತ್ ಸಿ... ಪತ್ರ ಬರೆದ ಸ...

## ಭವಿಷ್ಯ

**ದಿನ** | ವಾರ | ಮಾಸ

| | | | | | |
|---|---|---|---|---|---|
| ಮೇಷ | ವೃಷಭ | ಮಿಥುನ | ಕಟಕ | ಸಿಂಹ | ಕನ್ಯಾ |
| ತುಲಾ | ವೃಶ್ಚಿಕ | ಧನು | ಮಕರ | ಕುಂಭ | ಮೀನ |

**ಇಂದಿನ ಟ್ರೆಂಡಿಂಗ್**

Coronavirus | Covid-19 | BJP | Congress | Politics | India | Rajasthan | Lockdown

**ಕನ್ನಡ ಸುದ್ದಿ** −

ರಾಜ್ಯ
ದೇಶ
ವಿದೇಶ
ಒಳ್ಳೆಯ ಸುದ್ದಿ
ವಾಣಿಜ್ಯ
ಸಮಗ್ರ ಮಾಹಿತಿ

**ಜಿಲ್ಲೆಗಳು** +

ಬೆಂಗಳೂರು
ಕೊಡಗು
ದಕ್ಷಿಣ ಕನ್ನಡ
ತುಮಕೂರು
ಮೈಸೂರು
ಬೆಳಗಾವಿ
ಇತರ ಜಿಲ್ಲೆಗಳು

**ಮನರಂಜನೆ** +

ಸಿನಿಮಾ
ಟಿವಿ
ರಂಗಭೂಮಿ
ಇತರ

**ಕ್ರೀಡೆ** +

ಕ್ರಿಕೆಟ್
ಟೆನಿಸ್
ಫುಟ್‌ಬಾಲ್
ಇತರ ಕ್ರೀಡೆ

**ತಂತ್ರಜ್ಞಾನ** +

ಸೋಷಿಯಲ್ ಮೀಡಿಯಾ
ವೈರಲ್
ವಿಜ್ಞಾನ

**ಅಭಿಮತ** +

ಚುರುಮುರಿ
ವ್ಯಕ್ತಿ
25 ವರ್ಷಗಳ ಹಿಂದೆ
50 ವರ್ಷಗಳ ಹಿಂದೆ
ಒಳನೋಟ
ಚರ್ಚೆ

**ಇತರ** +

ಕಾರ್ಟೂನ್ ಲೋಕ
ಆರೋಗ್ಯ
ಸೌಂದರ್ಯ
ಪ್ರವಾಸ
ಚಾರಣ
ಮಹಿಳೆ

**ಪ್ರಜಾವಾಣಿ ವಿಶೇಷ** +

ಫ್ಯಾಕ್ಟ್ ಚೆಕ್
ಪದಬಂಧ
ಆಟೋಮೊಬೈಲ್ಸ್
ವಾಸ್ತು
ವೈಶಿಷ್ಟ್ಯಪೂರ್ಣ
ಧರ್ಮ
ಸಮಗ್ರ ಮಾಹಿತಿ

**ಲಾಕ್‌ಡೌನ್**

**ಕೋವಿಡ್**

**KANNADA JOBS**

**2020 ಭವಿಷ್ಯ**

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಕಾರ್ಟೂನ್

**ಟಾಪ್ ಟ್ರೆಂಡಿಂಗ್**

ಭೂಪಟದಲ್ಲಿ ಇಲ್ಲ ಪಿಒಕೆ: ಪಠ್ಯಪುಸ್ತಕ ರದ್ದುಗೊಳಿಸಿದ ಪಾಕಿಸ್ತಾನ
ಚೀನಾದ ಮತ್ತಷ್ಟು ಆ್ಯಪ್‌ಗಳಿಗೆ ನಿಷೇಧದ ಶಿಕ್ಷೆ
ಸಾರಿಗೆ ಸಿಬ್ಬಂದಿಗೆ ವೇತನ ಬಿಡುಗಡೆ: ಡಿಸಿಎಂ ಸವದಿ ಘೋಷಣೆ
ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಪಕ್ಷದ ಹೆಮ್ಮೆ: ಸೋನಿಯಾ ಗಾಂಧಿ
Viral Video | ಕಡ್ಡಿ ಬಳಸಿ ತುರಿಕೆ ನಿವಾರಿಸಿಕೊಂಡ ಆನೆಗಳು!

**SERVICES**

About Epaper Archives Sitemap Contact

**OUR GROUP SITES**

Printers Mysore Deccan Herald Sudha Mayura

Privacy Policy Terms Disclaimer

© 2020 The Printers (Mysore) Private Ltd.